# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 430

2) ಸದಸ್ಯರ ಹೆಸರು : ಶ್ರೀ ತಿಪ್ಪಣ್ಣಪ್ಪ ಕಮಕನೂರು (ವಿಧಾನಸಭೆಯಿಂದ ಚುನಾಯಿತರಾದವರು)

3) ಉತ್ತರಿಸಬೇಕಾದ ದಿನಾಂಕ : 13-08-2025

4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಮೀನುಗಾರರಿಗೆ ನೀಡಿದ ಸವಲತ್ತುಗಳಾವುವು;<br>(ಮಾಹಿತಿ ಒದಗಿಸುವುದು) | ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಮೀನುಗಾರರಿಗೆ ನೀಡಿದ ಸವಲತ್ತುಗಳ ಮಾಹಿತಿಯನ್ನು **ಅನುಬಂಧ -1** ರಲ್ಲಿ ನೀಡಲಾಗಿದೆ. |
| ಆ) | ಮೀನುಗಾರರ ಆರ್ಥಿಕ ಸ್ವಾವಲಂಬನೆ ಗಾಗಿ ನೀಡಿರುವ ಯೋಜನೆಗಳನ್ನು ಉನ್ನತೀಕರಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ; | ಮೀನುಗಾರರ ಆರ್ಥಿಕ ಸ್ವಾವಲಂಬನೆಗಾಗಿ ಯೋಜನೆಗಳನ್ನು ಉನ್ನತೀಕರಿಸಲು ತೆಗೆದುಕೊಂಡ ಕ್ರಮಗಳ ಮಾಹಿತಿಯನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |
| ಇ) | ಕೇಂದ್ರ ಸರ್ಕಾರದ ಸಹಯೋಗದಲ್ಲಿ ಹೊಸ ಯೋಜನೆಗಳನ್ನು ಜಾರಿಗೆ ತರುವ ಆಲೋಚನೆ ಸರ್ಕಾರಕ್ಕಿದೆಯೇ; | ಕೇಂದ್ರ ಸರ್ಕಾರವು ಮೀನುಗಾರಿಕೆಗೆ ಸಂಬಂಧಿಸಿದಂತೆ, ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಸದರಿ ಯೋಜನೆಯಡಿ ಮೀನುಗಾರಿಕೆ ಇಲಾಖೆಯಡಿ ವಿವಿಧ ಘಟಕಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕೇಂದ್ರ ಸರ್ಕಾರವು ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆ ಹಂತ 2ನ್ನು ಜಾರಿಗೆ ತರಲು ರಾಜ್ಯಗಳಿಂದ ಅಭಿಪ್ರಾಯ, ಸಲಹೆಗಳನ್ನು ಸಂಗ್ರಹಿಸುತ್ತಿದ್ದಾರೆ. |
| ಈ) | ಹಾಗಿದ್ದಲ್ಲಿ, ಈ ಸಾಲಿನಲ್ಲಿ ಲಭಿಸಿರುವ ಕೇಂದ್ರದ ಸಹಾಯಧನವೆಷ್ಟು; ಯಾವ ಯೋಜನೆಗಳನ್ನು ಹೊಸದಾಗಿ ಜಾರಿಗೆ ತರಲಾಗುವುದು? | 2025-26 ನೇ ಸಾಲಿನಲ್ಲಿ ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ರೂ. 50.00 ಕೋಟಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿರುತ್ತದೆ.<br><br>PMMKSSY (ಪ್ರಧಾನಮಂತ್ರಿ ಮತ್ಸ್ಯಕಿಸಾನ್ ಸಹ ಯೋಜನೆ)ಯನ್ನು ಕೇಂದ್ರ ಸರ್ಕಾರದಿಂದ ಜಾರಿಗೆ ತಂದಿದ್ದು, ಪ್ರಸ್ತುತ National Fisheries Digital Platform (NFDP)ರಡಿ ಮೀನುಗಾರರನ್ನು ನೊಂದಾಯಿಸಲಾಗುತ್ತಿದೆ. |

ಸಂಖ್ಯೆ: ಪಸಂಮೀ ಇ-128 ಮೀಇಇ 2025

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ [illegible] (ವಿಧಾನಸಭೆಯಿಂದ ಚುನಾಯಿತರಾದ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 430 ಕ್ಕೆ

## ಅನುಬಂಧ-1

## 2022-23 ನೇ ಸಾಲಿನಲ್ಲಿ ಮೀನುಗಾರರಿಗೆ ನೀಡಿದ ಸವಲತ್ತುಗಳ ಮಾಹಿತಿ

- "ಯಾಂತ್ರೀಕೃತ ಮೀನುಗಾರಿಕೆ ದೋಣಿಗಳಿಗೆ ಡೀಸೆಲ್- ಮಾರಾಟ ತೆರಿಗೆ ಮರುಪಾವತಿ" ಎಂಬ ಯೋಜನೆಯಡಿ 2022-23ನೇ ಸಾಲಿನಲ್ಲಿ ಒಟ್ಟು 1.74 ಲಕ್ಷ ಕಿಲೋ ಲೀಟರ್ ಡೀಸೆಲನ್ನು 3456 ಯಾಂತ್ರೀಕೃತ ಮೀನುಗಾರಿಕಾ ದೋಣಿಗಳಿಗೆ ಅನುಮೋದಿತ ಡೀಸೆಲ್ ಬಂಕ್‌ಗಳಿಂದ ನೇರವಾಗಿ ವಿತರಿಸಲಾಗಿದೆ.

- ಕರಾವಳಿಯಲ್ಲಿ ಪರ್ಮಿಟ್ ಪಡೆದ 8030 ಮೋಟರಿಕೃತ ಮೀನುಗಾರಿಕೆ ದೋಣಿಗಳಿಗೆ ಮಾಸಿಕ 1355 ಕಿಲೋ ಲೀಟರ್ ಸೀಮೆ ಎಣ್ಣೆಯನ್ನು ಪಡಿತರ ದರದಲ್ಲಿ ನೀಡಲಾಗುತ್ತಿದೆ. 2022-23 ನೇ ಸಾಲಿನಲ್ಲಿ ಒಟ್ಟು 9172 ಕಿಲೋ ಲೀಟರ್ ಸೀಮೆ ಎಣ್ಣೆಯನ್ನು ಪಡಿತರ ದರದಲ್ಲಿ ಮೋಟರಿಕೃತ ಮೀನುಗಾರಿಕೆ ದೋಣಿಗಳಿಗೆ ನೀಡಲಾಗಿದೆ.

- ಸಂಕಷ್ಟ ಪರಿಹಾರ ನಿಧಿ ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ ವಿವಿಧ ಜಿಲ್ಲೆಗಳ 23 ಮೃತ ಮೀನುಗಾರರ ಅವಲಂಬಿತರಿಗೆ ರೂ.132.50.00 ಲಕ್ಷ ಪರಿಹಾರ ನೀಡಲಾಗಿದೆ ಹಾಗೂ 10 ದೋಣಿ/ಬಲೆಹಾನಿ ಪ್ರಕರಣಗಳಿಗೆ ಒಟ್ಟು ರೂ. 5.30 ಲಕ್ಷ ಪರಿಹಾರವನ್ನು ವಿತರಿಸಲಾಗಿದೆ.

- ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ವಾಣಿಜ್ಯ / ಗ್ರಾಮೀಣ ಪ್ರಾದೇಶಿಕ ಬ್ಯಾಂಕ್‌ಗಳಿಂದ ಮೀನುಗಾರರಿಗೆ ರೂ.50,000 ಗಳವರೆಗೆ ಶೇ.2ರ ಬಡ್ಡಿ ದರದಲ್ಲಿ ಸಾಲವನ್ನು ನೀಡಲಾಗುತ್ತಿದೆ (ಮಹಿಳೆಯರಿಗೆ 0%). 2022-23ನೇ ಸಾಲಿನಲ್ಲಿ 3441 ಪ್ರಕರಣಗಳಲ್ಲಿ ರೂ.50.00 ಲಕ್ಷಗಳ ಬಡ್ಡಿ ಮೊತ್ತವನ್ನು ಸಾಲ ಪಡೆದ ಬ್ಯಾಂಕ್ ಗಳಿಗೆ ಪಾವತಿಸಲಾಗಿದೆ.

- ನೀಲಿಕ್ರಾಂತಿ/ಪಿ.ಎಮ್.ಎಮ್.ಎಸ್.ವೈ.-ಸಮಗ್ರ ಮೀನುಗಾರಿಕೆ ಅಭಿವೃದ್ಧಿ ಮತ್ತು ನಿರ್ವಹಣೆ ಯೋಜನೆಯಡಿ ಕರಾವಳಿ ಮೀನುಗಾರಿಕೆ, ಮೂಲಭೂತ ಸೌಲಭ್ಯ ಮತ್ತು ಹಿಡುವಳಿ ನಂತರದ ಚಟುವಟಿಕೆಗಳ ಅಭಿವೃದ್ಧಿ, ಮೀನುಗಾರರ ಕಲ್ಯಾಣಕ್ಕಾಗಿ ರಾಷ್ಟ್ರೀಯ ಯೋಜನೆ, ಒಳನಾಡು ಮೀನುಗಾರಿಕೆ ಮತ್ತು ಜಲಕೃಷಿ ಅಭಿವೃದ್ಧಿ, ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ ಮತ್ತು ಅದರ ಚಟುವಟಿಕೆಗಳು ಮತ್ತು ಇತರೆ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸಾಮಾನ್ಯ ವರ್ಗದ ಫಲಾನುಭವಿಗಳಿಗೆ 40% ಮತ್ತು ಪ.ಜಾ/ ಪ.ಪಂ/ ಮಹಿಳೆಯರಿಗೆ 60% ಸಹಾಯಧನವನ್ನು ನೀಡಲಾಗುತ್ತದೆ. 2022-23ನೇ ಸಾಲಿನಲ್ಲಿ ಸದರಿ ಯೋಜನೆಯಡಿ ರೂ.7231.96 ಲಕ್ಷಗಳನ್ನು 1226 ಫಲಾನುಭವಿಗಳಿಗೆ ವಿವಿಧ ಕಾರ್ಯಕ್ರಮಗಳಿಗೆ ವೆಚ್ಚ ಮಾಡಲಾಗಿದೆ.

- ಮೀನು ಮರಿಗಳ ಸಾಕಣೆಯನ್ನು ಪ್ರೋತ್ಸಾಹಿಸಲು ಜಲಾಶಯಗಳ/ಕೆರೆಗಳ ಅಂಚಿನಲ್ಲಿ ಮೀನುಮರಿಗಳ ಸಾಕಣೆ ಕೊಳಗಳ ನಿರ್ಮಾಣಕ್ಕೆ ಗರಿಷ್ಠ ರೂ.2.50 ಲಕ್ಷ ಸಹಾಯಧನ ನೀಡುವ ಯೋಜನೆ ರೂಪಿಸಲಾಗಿದೆ. ಈ ಯೋಜನೆಯಡಿ 10.00 ಹೆಕ್ಟೇರ್ ಮೀನುಮರಿಗಳ ಸಾಕಣೆಯ ಕೊಳಗಳ ನಿರ್ಮಾಣಕ್ಕೆ ರೂ.25.00 ಲಕ್ಷ ಸಹಾಯಧನ ನೀಡಲಾಗಿದೆ.

- ರಾಜ್ಯದ 38 ಜಲಾಶಯಗಳಲ್ಲಿ 583.56 ಲಕ್ಷ ಬಲಿತ ಗೆಂಡೆ ಮೀನುಮರಿಗಳನ್ನು ದಾಸ್ತಾನು ಮಾಡಿ ಅಭಿವೃದ್ಧಿಪಡಿಸಲಾಗಿದೆ.

- ಮೀನುಗಾರಿಕೆ ಸಲಕರಣೆ ಕಿಟ್‌ಗಳನ್ನು 1250 ಮೀನುಗಾರರಿಗೆ ರೂ. 125.00 ಲಕ್ಷ ವೆಚ್ಚದಲ್ಲಿ ವಿತರಿಸಲಾಗಿದ್ದು, ಸದರಿ ಸಲಕರಣೆಗಳನ್ನು ಶೇ.100 ಆರ್ಥಿಕ ನೆರವಿನೊಂದಿಗೆ ನೀಡಲಾಗಿದೆ.

- ಮಂಜುಗಡ್ಡೆ ಸ್ಥಾವರಗಳು ಉಪಯೋಗಿಸಿದ ವಿದ್ಯುಚ್ಛಕ್ತಿಗೆ ಸಹಾಯಧನ ಯೋಜನೆಯಡಿ 180 ಮಂಜುಗಡ್ಡೆ ಸ್ಥಾವರಗಳಿಗೆ ರೂ.400.00 ಲಕ್ಷ ಆರ್ಥಿಕ ನೆರವು ನೀಡಲಾಗಿದೆ.

- ಉಳಿತಾಯ ಮತ್ತು ಪರಿಹಾರ ಯೋಜನೆಯಡಿ ಸುಮಾರು 24004 ಮೀನುಗಾರರರಿಗೆ ರೂ.612.00 ಲಕ್ಷಗಳ ಪರಿಹಾರವನ್ನು ನೀಡಲಾಗಿದೆ.

- ಮೀನುಗಾರರಲ್ಲಿ ಉದ್ಯಮಶೀಲತೆಯನ್ನು ಉತ್ತೇಜಿಸಲು ರೂ.20413.00 ಲಕ್ಷಗಳ ಮಂಜೂರಾತಿಯೊಂದಿಗೆ 12,753 ಕಿಸ್ಸಾನ್ ಕ್ರೆಡಿಟ್ ಕಾರ್ಡ್‌ಗಳನ್ನು ವಿತರಿಸಲಾಗಿದೆ.

- 2022-23ನೇ ಸಾಲಿನಲ್ಲಿ ಮೀನುಗಾರಿಕೆ ಸಾಲಮನ್ನಾ ಯೋಜನೆಯಡಿ 162 ಮೀನುಗಾರರಿಗೆ ರೂ. 30.20 ಲಕ್ಷಗಳನ್ನು ಪಾವತಿಸಲಾಗಿದೆ.

- ಮೀನುಗಾರಿಕೆ ವಲಯದಲ್ಲಿ, 2021-22ರಲ್ಲಿ ರಾಜ್ಯದಾದ್ಯಂತ 53 ಮೀನು ಕೃಷಿಕರ ಉತ್ಪಾದಕ ಸಂಸ್ಥೆಗಳನ್ನು (ಅಮೃತ್ ಎಫ್‌ಪಿಒ) ಹಾಗೂ 2022-23ನೇ ಸಾಲಿನಲ್ಲಿ 09 ಮೀನು ಕೃಷಿಕರ ಉತ್ಪಾದಕ ಸಂಸ್ಥೆಗಳನ್ನು ನೋಂದಾಯಿಸಲಾಗಿದೆ.

- 2022-23ನೇ ಸಾಲಿನಲ್ಲಿ 5927 ಗ್ರಾಮ ಪಂಚಾಯತಿ ಕೆರೆಗಳಲ್ಲಿ ರೂ.426.00 ಲಕ್ಷಗಳ ಅನುದಾನದಲ್ಲಿ 3.16 ಕೋಟಿ ಮೀನುಮರಿಗಳನ್ನು ದಾಸ್ತಾನು ಮಾಡಲಾಗಿದೆ.

## 2023-24ನೇ ಸಾಲಿನಲ್ಲಿ ಮೀನುಗಾರರಿಗೆ ನೀಡಿದ ಸವಲತ್ತುಗಳ ಮಾಹಿತಿ

- "ಯಾಂತ್ರೀಕೃತ ಮೀನುಗಾರಿಕೆ ದೋಣಿಗಳಿಗೆ ಡೀಸೆಲ್- ಮಾರಾಟ ತೆರಿಗೆ ಮರುಪಾವತಿ" ಎಂಬ ಯೋಜನೆಯಡಿ 2023-24ನೇ ಸಾಲಿನಲ್ಲಿ ಒಟ್ಟು 1.76 ಲಕ್ಷ ಕಿಲೋ ಲೀಟರ್ ಡೀಸೆಲನ್ನು 3551 ಯಾಂತ್ರೀಕೃತ ಮೀನುಗಾರಿಕಾ ದೋಣಿಗಳಿಗೆ ಅನುಮೋದಿತ ಡೀಸೆಲ್ ಬಂಕ್‌ಗಳಿಂದ ನೇರವಾಗಿ ವಿತರಿಸಲಾಗಿದೆ.

- ಕರಾವಳಿ ಜಿಲ್ಲೆಯಲ್ಲಿ ಪರವಾನಿಗೆ ಹೊಂದಿರುವವರಿಗೆ 8030 ಮೋಟರಿಕೃತ ದೋಣಿಗಳಿಗೆ PDS ದರದಲ್ಲಿ 300 ಕಿಲೋ ಲೀಟರ್ ಸೀಮೆಎಣ್ಣೆ/ ತಿಂಗಳು ನೀಡಲಾಗುತ್ತಿದೆ. 2023-24ರಲ್ಲಿ ಭಾರತ ಸರ್ಕಾರವು 1484 ಕಿ.ಲೀ. ಸೀಮೆಎಣ್ಣೆಯನ್ನು ಹಂಚಿಕೆ ಮಾಡಿದೆ ಮತ್ತು 7364 ಕಿ.ಲೀ. ಕೈಗಾರಿಕಾ ಸೀಮೆಎಣ್ಣೆಯನ್ನು ರಾಜ್ಯ ಸರ್ಕಾರವು ಪೂರೈಸಿದೆ ಮತ್ತು ಆದ್ದರಿಂದ ಒಟ್ಟು 8848 ಕಿ.ಲೀ. ಸೀಮೆಎಣ್ಣೆಯನ್ನು ಮೂರು ಕರಾವಳಿಯ ಜಿಲ್ಲೆಗಳ 7845 ಮೋಟರಿಕೃತ ದೋಣಿಗಳಿಗೆ ವಿತರಿಸಲಾಗಿದೆ.

- ಸಂಕಷ್ಟ ಪರಿಹಾರ ನಿಧಿ ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ ವಿವಿಧ ಜಿಲ್ಲೆಗಳ 126 ಮೃತ ಮೀನುಗಾರರ ಅವಲಂಬಿತರಿಗೆ ರೂ.703.00 ಲಕ್ಷ ಪರಿಹಾರ ನೀಡಲಾಗಿದೆ ಹಾಗೂ 86 ದೋಣಿ/ಬಲೆಹಾನಿ ಪ್ರಕರಣಗಳಿಗೆ ಒಟ್ಟು ರೂ. 187.00 ಲಕ್ಷ ಪರಿಹಾರವನ್ನು ವಿತರಿಸಲಾಗಿದೆ. ಅಲ್ಲದೇ, ಸಂಕಷ್ಟಕ್ಕೀಡಾಗುವ ಮೀನುಗಾರರ ಆರ್ಥಿಕ ನೆರವಿಗೆ ಅನುಕೂಲ ಮಾಡಲು ವಿವಿಧ ಪ್ರಕರಣಗಳಿಗೆ ನೀಡುತ್ತಿರುವ ಪರಿಹಾರ ಮೊತ್ತವನ್ನು ಪರಿಷ್ಕರಿಸಿ ಹೆಚ್ಚಿಸಲಾಗಿದೆ.

- ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ವಾಣಿಜ್ಯ / ಗ್ರಾಮೀಣ ಪ್ರಾದೇಶಿಕ ಬ್ಯಾಂಕ್‌ಗಳಿಂದ ಮೀನುಗಾರರಿಗೆ ರೂ.50,000 ಗಳವರೆಗೆ ಶೇ.2ರ ಬಡ್ಡಿ ದರದಲ್ಲಿ ಸಾಲವನ್ನು ನೀಡಲಾಗುತ್ತಿದೆ (ಮಹಿಳೆಯರಿಗೆ 0%). 2023-24 ರಲ್ಲಿ, ವಾಣಿಜ್ಯ ಬ್ಯಾಂಕುಗಳಿಗೆ ಬಡ್ಡಿಯ ವ್ಯತ್ಯಾಸ ಮರುಪಾವತಿ ಯೋಜನೆಯಡಿಯಲ್ಲಿ ಸಾಲದ ಮಿತಿಯನ್ನು ರೂ.50,000/- ರಿಂದ ರೂ.3,00,000/- ಕ್ಕೆ ಸರ್ಕಾರವು ವಾಣಿಜ್ಯ/ಗ್ರಾಮೀಣ ಪ್ರಾದೇಶಿಕ ಬ್ಯಾಂಕ್‌ಗಳಿಂದ ಮೀನುಗಾರ ಮಹಿಳೆಯರಿಗೆ ಹೆಚ್ಚಿಸಿದೆ. 2023-24 ರಲ್ಲಿ ರೂ. 50.00 ಲಕ್ಷದ 2465 ಕ್ಲೈಮ್‌ಗಳನ್ನು ಇತ್ಯರ್ಥಗೊಳಿಸಲಾಗಿದೆ.

- ನೀಲಿಕ್ರಾಂತಿ/ಪಿ.ಎಮ್.ಎಮ್.ಎಸ್.ವೈ.-ಸಮಗ್ರ ಮೀನುಗಾರಿಕೆ ಅಭಿವೃದ್ಧಿ ಮತ್ತು ನಿರ್ವಹಣೆ ಯೋಜನೆಯಡಿ ಕರಾವಳಿ ಮೀನುಗಾರಿಕೆ, ಮೂಲಭೂತ ಸೌಲಭ್ಯ ಮತ್ತು ಹಿಡುವಳಿ ನಂತರದ ಚಟುವಟಿಕೆಗಳ ಅಭಿವೃದ್ಧಿ, ಮೀನುಗಾರರ ಕಲ್ಯಾಣಕ್ಕಾಗಿ ರಾಷ್ಟ್ರೀಯ ಯೋಜನೆ, ಒಳನಾಡು ಮೀನುಗಾರಿಕೆ ಮತ್ತು ಜಲಕೃಷಿ ಅಭಿವೃದ್ಧಿ, ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ ಮತ್ತು ಅದರ ಚಟುವಟಿಕೆಗಳು ಮತ್ತು ಇತರೆ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸಾಮಾನ್ಯ ವರ್ಗದ ಫಲಾನುಭವಿಗಳಿಗೆ 40% ಮತ್ತು ಪ.ಜಾ/ ಪ.ಪಂ/ ಮಹಿಳೆಯರಿಗೆ 60% ಸಹಾಯಧನವನ್ನು ನೀಡಲಾಗುತ್ತದೆ. 2023-24 ನೇ ಸಾಲಿನಲ್ಲಿ 1077 ಫಲಾನುಭವಿಗಳಿಗೆ ಒಟ್ಟು ರೂ. 5336.33 ಲಕ್ಷಗಳ ಸಹಾಯಧನ ನೀಡಲಾಗಿರುತ್ತದೆ.

- ಮೀನು ಮರಿಗಳ ಸಾಕಣೆಯನ್ನು ಪ್ರೋತ್ಸಾಹಿಸಲು ಜಲಾಶಯಗಳ/ಕೆರೆಗಳ ಅಂಚಿನಲ್ಲಿ ಮೀನುಮರಿಗಳ ಸಾಕಣೆ ಕೊಳಗಳ ನಿರ್ಮಾಣಕ್ಕೆ ಗರಿಷ್ಠ ರೂ.2.50 ಲಕ್ಷ ಸಹಾಯಧನ ನೀಡುವ ಯೋಜನೆ ರೂಪಿಸಲಾಗಿದೆ. ಈ ಯೋಜನೆಯಡಿ 32 ಹೆಕ್ಟೇರ್ ಮೀನುಮರಿಗಳ ಸಾಕಣೆಯ ಕೊಳಗಳ ನಿರ್ಮಾಣಕ್ಕೆ ರೂ.80.00 ಲಕ್ಷ ಸಹಾಯಧನ ನೀಡಲಾಗಿದೆ.

- ರಾಜ್ಯದ 38 ಜಲಾಶಯಗಳಲ್ಲಿ 1.48 ಕೋಟಿ ಬಲಿತ ಗೆಂಡೆ ಮೀನುಮರಿಗಳನ್ನು ದಾಸ್ತಾನು ಮಾಡಿ ಅಭಿವೃದ್ಧಿಪಡಿಸಲಾಗಿದೆ.

- ಮೀನುಗಾರಿಕೆ ಸಲಕರಣೆ ಕಿಟ್‌ಗಳನ್ನು 1250 ಮೀನುಗಾರರಿಗೆ ರೂ. 125.00 ಲಕ್ಷ ವೆಚ್ಚದಲ್ಲಿ ವಿತರಿಸಲಾಗಿದ್ದು, ಸದರಿ ಸಲಕರಣೆಗಳನ್ನು ಶೇ.100 ಆರ್ಥಿಕ ನೆರವಿನೊಂದಿಗೆ ನೀಡಲಾಗಿದೆ.

- ಮಂಜುಗಡ್ಡೆ ಸ್ಥಾವರಗಳು ಉಪಯೋಗಿಸಿದ ವಿದ್ಯುಚ್ಛಕ್ತಿಗೆ ಸಹಾಯಧನ ಯೋಜನೆಯಡಿ 179 ಮಂಜುಗಡ್ಡೆ ಸ್ಥಾವರಗಳಿಗೆ ರೂ.406.00 ಲಕ್ಷ ಆರ್ಥಿಕ ನೆರವು ನೀಡಲಾಗಿದೆ.

- ಉಳಿತಾಯ ಮತ್ತು ಪರಿಹಾರ ಯೋಜನೆಯಡಿ ಸುಮಾರು 24003 ಮೀನುಗಾರರರಿಗೆ ರೂ.408.00 ಲಕ್ಷಗಳ ಪರಿಹಾರವನ್ನು ನೀಡಲಾಗಿದೆ.

- ಮೀನುಗಾರರಲ್ಲಿ ಉದ್ಯಮಶೀಲತೆಯನ್ನು ಉತ್ತೇಜಿಸಲು ರೂ. 368.03 ಲಕ್ಷಗಳ ಮಂಜೂರಾತಿಯೊಂದಿಗೆ 14226 ಕಿಸ್ಸಾನ್ ಕ್ರೆಡಿಟ್ ಕಾರ್ಡ್‌ಗಳನ್ನು ವಿತರಿಸಲಾಗಿದೆ.

- ಮೀನುಗಾರಿಕೆ ವಲಯದಲ್ಲಿ, 2022-23 ನೇ ಸಾಲಿನಲ್ಲಿ ರಾಜ್ಯದಾದ್ಯಂತ 62 ಮೀನು ಕೃಷಿಕರ ಉತ್ಪಾದಕ ಸಂಸ್ಥೆಗಳು (ಅಮೃತ್ ಎಫ್‌ಪಿಒ) ನೊಂದಣಿಯಾಗಿರುತ್ತದೆ.

## 2024-25ನೇ ಸಾಲಿನಲ್ಲಿ ಮೀನುಗಾರರಿಗೆ ನೀಡಿದ ಸವಲತ್ತುಗಳ ಮಾಹಿತಿ

- "ಮೋಟಾರೀಕೃತ ಮೀನುಗಾರಿಕೆ ದೋಣಿಗಳಿಗೆ ಡೀಸೆಲ್- ಮಾರಾಟ ತೆರಿಗೆ ಮರುಪಾವತಿ" ಎಂಬ ಯೋಜನೆಯಡಿ 2024-25ನೇ ಸಾಲಿನಲ್ಲಿ ಒಟ್ಟು 1.70 ಲಕ್ಷ ಕಿಲೋ ಲೀಟರ್ ಡೀಸೆಲನ್ನು 3456 ಮೋಟಾರೀಕೃತ ಮೀನುಗಾರಿಕಾ ದೋಣಿಗಳಿಗೆ ಅನುಮೋದಿತ ಡೀಸೆಲ್ ಬಂಕ್‌ಗಳಿಂದ ನೇರವಾಗಿ ವಿತರಿಸಲಾಗಿದೆ.

- ಕರಾವಳಿ ಜಿಲ್ಲೆಯಲ್ಲಿ ಪರವಾನಿಗೆ ಹೊಂದಿರುವವರಿಗೆ 8030 ಮೋಟರೀಕೃತ ದೋಣಿಗಳಿಗೆ PDS ದರದಲ್ಲಿ 300 ಕಿಲೋ ಲೀಟರ್ ಸೀಮೆಎಣ್ಣೆ/ ತಿಂಗಳು ನೀಡಲಾಗುತ್ತಿದೆ. 2024-25ರಲ್ಲಿ ಭಾರತ ಸರ್ಕಾರವು 732 ಕಿ.ಲೀ. ಸೀಮೆಎಣ್ಣೆಯನ್ನು ಹಂಚಿಕೆ ಮಾಡಿದೆ ಮತ್ತು 11811.80 ಕಿ.ಲೀ. ಕೈಗಾರಿಕಾ ಸೀಮೆಎಣ್ಣೆಯನ್ನು ರಾಜ್ಯ ಸರ್ಕಾರವು ಪೂರೈಸಿದೆ ಮತ್ತು ಆದ್ದರಿಂದ ಒಟ್ಟು 12543.80 ಕಿ.ಲೀ. ಸೀಮೆಎಣ್ಣೆಯನ್ನು ಮೂರು ಕರಾವಳಿಯ ಜಿಲ್ಲೆಗಳ 7253 ಮೋಟರೀಕೃತ ದೋಣಿಗಳಿಗೆ ವಿತರಿಸಲಾಗಿದೆ.

- ಸಂಕಷ್ಟ ಪರಿಹಾರ ನಿಧಿ ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ ವಿವಿಧ ಜಿಲ್ಲೆಗಳ 105 ಮೃತ ಮೀನುಗಾರರ ಅವಲಂಬಿತರಿಗೆ ರೂ.555.00 ಲಕ್ಷ ಪರಿಹಾರ ನೀಡಲಾಗಿದೆ ಮತ್ತು 98 ದೋಣಿ/ಬಲೆಹಾನಿ ಪ್ರಕರಣಗಳಿಗೆ ಒಟ್ಟು ರೂ. 49.65 ಲಕ್ಷ ಪರಿಹಾರವನ್ನು ವಿತರಿಸಲಾಗಿದೆ. ಹಾಗೂ, ಮೀನುಗಾರರ ವೈದ್ಯಕೀಯ ವೆಚ್ಚ ಮರುಪಾವತಿಯ 8 ಪ್ರಕರಣಗಳಿಗೆ ಒಟ್ಟು ರೂ.5.63 ಲಕ್ಷ ಪರಿಹಾರವನ್ನು ವಿತರಿಸಲಾಗಿದೆ.

- ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ವಾಣಿಜ್ಯ / ಗ್ರಾಮೀಣ ಪ್ರಾದೇಶಿಕ ಬ್ಯಾಂಕ್‌ಗಳಿಂದ ಮೀನುಗಾರರಿಗೆ ರೂ.50,000 ಗಳವರೆಗೆ ಶೇ.2ರ ಬಡ್ಡಿ ದರದಲ್ಲಿ ಸಾಲವನ್ನು ನೀಡಲಾಗುತ್ತಿದೆ (ಮಹಿಳೆಯರಿಗೆ 0%). 2024-25 ರಲ್ಲಿ, ವಾಣಿಜ್ಯ ಬ್ಯಾಂಕುಗಳಿಗೆ ಬಡ್ಡಿಯ ವ್ಯತ್ಯಾಸ ಮರುಪಾವತಿ ಯೋಜನೆಯಡಿಯಲ್ಲಿ ಸಾಲದ ಮಿತಿಯನ್ನು ರೂ.50,000/- ರಿಂದ ರೂ.3,00,000/- ಕ್ಕೆ ಸರ್ಕಾರವು ವಾಣಿಜ್ಯ/ಗ್ರಾಮೀಣ ಪ್ರಾದೇಶಿಕ ಬ್ಯಾಂಕ್‌ಗಳಿಂದ ಮೀನುಗಾರ ಮಹಿಳೆಯರಿಗೆ ಹೆಚ್ಚಿಸಿದೆ. 2024-25ರಲ್ಲಿ ರೂ. 50.00 ಲಕ್ಷದ 1060 ಕ್ಲೈಮ್‌ಗಳನ್ನು ಇತ್ಯರ್ಥಗೊಳಿಸಲಾಗಿದೆ.

- ನೀಲಿಕ್ರಾಂತಿ/ಪಿ.ಎಮ್.ಎಮ್.ಎಸ್.ವೈ.-ಸಮಗ್ರ ಮೀನುಗಾರಿಕೆ ಅಭಿವೃದ್ಧಿ ಮತ್ತು ನಿರ್ವಹಣೆ ಯೋಜನೆಯಡಿ ಕರಾವಳಿ ಮೀನುಗಾರಿಕೆ, ಮೂಲಭೂತ ಸೌಲಭ್ಯ ಮತ್ತು ಹಿಡುವಳಿ ನಂತರದ ಚಟುವಟಿಕೆಗಳ ಅಭಿವೃದ್ಧಿ, ಮೀನುಗಾರರ ಕಲ್ಯಾಣಕ್ಕಾಗಿ ರಾಷ್ಟ್ರೀಯ ಯೋಜನೆ, ಒಳನಾಡು ಮೀನುಗಾರಿಕೆ ಮತ್ತು ಜಲಕೃಷಿ ಅಭಿವೃದ್ಧಿ, ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ ಮತ್ತು ಅದರ ಚಟುವಟಿಕೆಗಳು ಮತ್ತು ಇತರೆ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸಾಮಾನ್ಯ ವರ್ಗದ ಫಲಾನುಭವಿಗಳಿಗೆ 40% ಮತ್ತು ಪ.ಜಾ/ ಪ.ಪಂ/ ಮಹಿಳೆಯರಿಗೆ 60% ಸಹಾಯಧನವನ್ನು ನೀಡಲಾಗುತ್ತದೆ. 2024-25ನೇ ಸಾಲಿನಲ್ಲಿ ಸದರಿ ಯೋಜನೆಯಡಿ ರೂ.5499.81 ಲಕ್ಷಗಳನ್ನು 1421 ಫಲಾನುಭವಿಗಳಿಗೆ ವಿವಿಧ ಕಾರ್ಯಕ್ರಮಗಳಿಗೆ ವೆಚ್ಚ ಮಾಡಲಾಗಿದೆ.

- ಮೀನು ಮರಿಗಳ ಸಾಕಣೆಯನ್ನು ಪ್ರೋತ್ಸಾಹಿಸಲು ಜಲಾಶಯಗಳ/ಕೆರೆಗಳ ಅಂಚಿನಲ್ಲಿ ಮೀನುಮರಿಗಳ ಸಾಕಣೆ ಕೊಳಗಳ ನಿರ್ಮಾಣಕ್ಕೆ ಗರಿಷ್ಠ ರೂ.2.50 ಲಕ್ಷ ಸಹಾಯಧನ ನೀಡುವ ಯೋಜನೆ ರೂಪಿಸಲಾಗಿದೆ. ಈ ಯೋಜನೆಯಡಿ 32 ಹೆಕ್ಟೇರ್ ಮೀನುಮರಿಗಳ ಸಾಕಣೆಯ ಕೊಳಗಳ ನಿರ್ಮಾಣಕ್ಕೆ ರೂ.80.00 ಲಕ್ಷ ಸಹಾಯಧನ ನೀಡಲಾಗಿದೆ.

- ರಾಜ್ಯದ 38 ಜಲಾಶಯಗಳಲ್ಲಿ 2.88 ಕೋಟಿ ಬಲಿತ ಗೆಂಡೆ ಮೀನುಮರಿಗಳನ್ನು ದಾಸ್ತಾನು ಮಾಡಿ ಅಭಿವೃದ್ಧಿಪಡಿಸಲಾಗಿದೆ.

- ಮೀನುಗಾರಿಕೆ ಸಲಕರಣೆ ಕಿಟ್‌ಗಳನ್ನು 1250 ಮೀನುಗಾರರಿಗೆ ರೂ. 125.00 ಲಕ್ಷ ವೆಚ್ಚದಲ್ಲಿ ವಿತರಿಸಲಾಗಿದ್ದು, ಸದರಿ ಸಲಕರಣೆಗಳನ್ನು ಶೇ.100 ಆರ್ಥಿಕ ನೆರವಿನೊಂದಿಗೆ ನೀಡಲಾಗಿದೆ.

- ಮಂಜುಗಡ್ಡೆ ಸ್ಥಾವರಗಳು ಉಪಯೋಗಿಸಿದ ವಿದ್ಯುಚ್ಛಕ್ತಿಗೆ ಸಹಾಯಧನ ಯೋಜನೆಯಡಿ 177 ಮಂಜುಗಡ್ಡೆ ಸ್ಥಾವರಗಳಿಗೆ ರೂ.704.55 ಲಕ್ಷ ಆರ್ಥಿಕ ನೆರವು ನೀಡಲಾಗಿದೆ.

- ಉಳಿತಾಯ ಮತ್ತು ಪರಿಹಾರ ಯೋಜನೆಯಡಿ ಸುಮಾರು 30344 ಮೀನುಗಾರರರಿಗೆ ರೂ. 910.32ಲಕ್ಷಗಳ ಪರಿಹಾರವನ್ನು ನೀಡಲಾಗಿದೆ.

- ಮತ್ಸ್ಯಆಶಾಕಿರಣ ಯೋಜನೆಯಡಿ 17133 ಫಲಾನುಭವಿಗಳಿಗೆ ರೂ.1500 ರಂತೆ ಪರಿಹಾರ ನೀಡಲು ರೂ.257.00 ಲಕ್ಷ ವೆಚ್ಚ ಮಾಡಲಾಗಿದೆ.

- ಮೀನುಗಾರರಲ್ಲಿ ಉದ್ಯಮಶೀಲತೆಯನ್ನು ಉತ್ತೇಜಿಸಲು ರೂ. 85.06 ಲಕ್ಷಗಳ ಮಂಜೂರಾತಿಯೊಂದಿಗೆ 530 ಕಿಸ್ಸಾನ್ ಕ್ರೆಡಿಟ್ ಕಾರ್ಡ್‌ಗಳನ್ನು ವಿತರಿಸಲಾಗಿದೆ.

- ಮೀನುಗಾರಿಕೆ ವಲಯದಲ್ಲಿ, 2022-23 ನೇ ಸಾಲಿನಲ್ಲಿ ರಾಜ್ಯದಾದ್ಯಂತ 62 ಮೀನು ಕೃಷಿಕರ ಉತ್ಪಾದಕ ಸಂಸ್ಥೆಗಳು (ಅಮೃತ್ ಎಫ್‌ಪಿಒ) ನೊಂದಣಿಯಾಗಿರುತ್ತದೆ ಹಾಗೂ 2024-25 ನೇ ಸಾಲಿನಲ್ಲಿ ರೂ.212.78 ಲಕ್ಷಗಳ ಅನುದಾನ ಒದಗಿಸಲಾಗಿದೆ.

ಮೀನುಗಾರಿಕೆ ನಿರ್ದೇಶಕರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 430 ಕ್ಕೆ**

**ಅನುಬಂಧ -2**

ಮೀನುಗಾರರ ಆರ್ಥಿಕ ಸ್ವಾವಲಂಬನೆಗಾಗಿ ನೀಡಿರುವ ಯೋಜನೆಗಳನ್ನು ಉನ್ನತೀಕರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳು ಈ ಕೆಳಕಂಡಂತಿವೆ.

1. **ಉಳಿತಾಯ ಹಾಗೂ ಪರಿಹಾರ ಯೋಜನೆ:**

ಈ ಯೋಜನೆಯಡಿ ಕರಾವಳಿ ಮೀನುಗಾರರಿಂದ ರೂ.1500/- ಗಳನ್ನು ಮೀನುಗಾರಿಕೆ ಅವಧಿಯಲ್ಲಿ ವಸೂಲಿ ಮಾಡಿ ಈ ಮೊತ್ತಕ್ಕೆ ಕೇಂದ್ರ ಸರ್ಕಾರ ದ ಪಾಲು ರೂ.1500/- ಮತ್ತು ರಾಜ್ಯ ಸರ್ಕಾರದ ಪಾಲು ರೂ.1500/- ಹಾಗೂ ಫಲಾನುಭವಿಯ ಪಾಲು ರೂ. 1500/- ಸೇರಿಸಿ ಹೀಗೆ ಒಟ್ಟು ರೂ.4500/- ಗಳನ್ನು ಮೀನುಗಾರಿಕೆ ನಿಷೇಧದ ಅವಧಿಯಲ್ಲಿ ಮೀನುಗಾರರಿಗೆ ನೀಡಲಾಗುತ್ತಿತ್ತು.

2024-25 ನೇ ಸಾಲಿನಿಂದ "ಮತ್ಸ್ಯ ಆಶಾಕಿರಣ ಯೋಜನೆಯಡಿ ಮೀನುಗಾರಿಕೆ ನಿಷೇಧದ ಅವಧಿಯಲ್ಲಿ ಕರಾವಳಿಯ ಮೀನುಗಾರರಿಗೆ ನೀಡುತ್ತಿರುವ ಪರಿಹಾರ ಮೊತ್ತದ ರಾಜ್ಯದ ಪಾಲನ್ನು 1,500 ರೂ. ಗಳಿಂದ 3,000 ರೂ.ಗಳಿಗೆ ಹೆಚ್ಚಿಸಲಾಗಿರುತ್ತದೆ. ಅದರಂತೆ, ಪ್ರಸ್ತುತ, ರಾಜ್ಯ ಸರ್ಕಾರದ ಪಾಲು ರೂ.300/-, ಕೇಂದ್ರ ಸರ್ಕಾರದ ಪಾಲು ರೂ.1500/- ಹಾಗೂ ಫಲಾನುಭವಿಯ ಪಾಲು ರೂ. 1500/- ಸೇರಿಸಿ ಹೀಗೆ ಒಟ್ಟು ರೂ.6000/- ಗಳನ್ನು ಮೀನುಗಾರಿಕೆ ನಿಷೇಧದ ಅವಧಿಯಲ್ಲಿ ಮೀನುಗಾರರಿಗೆ ನೀಡಲಾಗುತ್ತಿದೆ.

2. **ಮೀನುಗಾರರಿಗೆ ನೀಡುವ ಸಾಲದ ವ್ಯತ್ಯಾಸದ ಬಡ್ಡಿಯನ್ನು ಬ್ಯಾಂಕ್ ಗಳಿಗೆ ಸರ್ಕಾರದಿಂದ ತುಂಬಿಕೊಡುವ ಯೋಜನೆ:**

2009-10 ನೇ ಸಾಲಿನಲ್ಲಿ ಮೀನುಗಾರರಿಗೆ 3% ಬಡ್ಡಿದರದಲ್ಲಿ ರೂ. 50,000/- ದವರೆಗೆ ಬ್ಯಾಂಕುಗಳಿಂದ ಸಾಲ ನೀಡುವ ಯೋಜನೆಯಡಿ, ಮಹಿಳಾ ಮೀನುಗಾರರನ್ನೊಳಗೊಂಡಂತೆ ಎಲ್ಲಾ ಮೀನುಗಾರರಿಗೆ ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ರೂ. 50,000/- ದ ವರೆಗೆ 3% ಬಡ್ಡಿದರದಲ್ಲಿ ಬ್ಯಾಂಕುಗಳಿಂದ ಸಾಲವನ್ನು ನೀಡಲಾಗುತ್ತಿತ್ತು. ವ್ಯತ್ಯಾಸದ ಬಡ್ಡಿಯ ಮೊತ್ತವನ್ನು ಇಲಾಖೆ ತುಂಬಿಕೊಡಲು ಈ ಯೋಜನೆಯಡಿ ಅವಕಾಶ ಕಲ್ಪಿಸಲಾಗಿತ್ತು.

ಸದರಿ ಯೋಜನೆಯನ್ನು ಮಾರ್ಪಡಿಸಿ ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ಮಹಿಳಾ ಮೀನುಗಾರರಿಗೆ ರೂ. 50,000/- ಗಳ ವರೆಗೆ ಶೇ. 2 ರ ಬಡ್ಡಿ ದರದಲ್ಲಿ ವಾಣಿಜ್ಯ / ಗ್ರಾಮೀಣ ಪ್ರಾದೇಶಿಕ ಬ್ಯಾಂಕ್‌ಗಳಿಂದ ಸಾಲವನ್ನು ನೀಡಲಾಗುತ್ತಿತ್ತು. 2018-19 ನೇ ಸಾಲಿನಿಂದ ಸದರಿ ಯೋಜನೆಯಡಿ, ಶೂನ್ಯ ಬಡ್ಡಿ ದರ ದಲ್ಲಿ ಮಹಿಳಾ ಮೀನುಗಾರರಿಗೆ ರೂ.50,000/- ವರೆಗೆ ಸಾಲ ನೀಡಲಾಗುತ್ತಿದೆ. 2023-24 ನೇ ಸಾಲಿನಿಂದ ಸದರಿ ಯೋಜನೆಯಡಿ ಮಹಿಳಾ ಮೀನುಗಾರರಿಗೆ ಶೂನ್ಯ ಬಡ್ಡಿ ದರದಲ್ಲಿ ನೀಡಲಾಗುತ್ತಿದ್ದ ಸಾಲದ ಮಿತಿಯನ್ನು ರೂ. 50,000/- ಗಳಿಂದ ರೂ. 3,00,000/- ಗಳವರೆಗೆ ಹೆಚ್ಚಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

3. **ಸಂಕಷ್ಟ ಪರಿಹಾರ ನಿಧಿಗೆ ಅಂಶದಾನಗಳು ಯೋಜನೆ :**

- ಮೀನುಗಾರಿಕೆಯಲ್ಲಿ ತೊಡಗಿರುವಾಗ **ಮರಣಹೊಂದಿದ ಪ್ರಕರಣಗಳಿಗೆ** ಸಂಕಷ್ಟ ಪರಿಹಾರ ನಿಧಿ ಯೋಜನೆಯಡಿ ಈ ಹಿಂದೆ ನೀಡಲಾಗುತ್ತಿದ್ದ ರೂ.6.00 ಲಕ್ಷ ಪರಿಹಾರವನ್ನು ರೂ.10.00 ಲಕ್ಷಗಳಿಗೆ ಹೆಚ್ಚಿಸಲಾಗಿದೆ.

- ನಾಡದೋಣಿ/ಮೋಟಾರಿಕೃತ/ಯಾಂತ್ರೀಕೃತ ಮೀನುಗಾರಿಕೆ ದೋಣಿ ಹಾನಿ ಪ್ರಕರಣಗಳಿಗೆ ಖರೀದಿ ಮೌಲ್ಯದ ಶೇಕಡ 50 ರಷ್ಟು ಮೌಲ್ಯವನ್ನು ಗರಿಷ್ಟ ರೂ.10.00 ಲಕ್ಷಗಳ ಗಳಿಗೆ ಒಳಪಟ್ಟು ಪರಿಹಾರ ನೀಡಲಾಗುತ್ತದೆ.
- ಮೀನುಗಾರಿಕೆಯಲ್ಲಿ ತೊಡಗಿರುವಾಗ ಅಪಘಾತ ಸಂಭವಿಸಿ ಮೀನುಗಾರರು **ಶಾಶ್ವತ ಅಂಗವಿಕಲರಾದಲ್ಲಿ** ಸಂಕಷ್ಟ ಪರಿಹಾರ ನಿಧಿ ಯೋಜನೆಯಡಿ ಈ ಹಿಂದೆ ನೀಡಲಾಗುತ್ತಿದ್ದ ರೂ.3.00 ಲಕ್ಷ ಪರಿಹಾರವನ್ನು ರೂ.4.00 ಲಕ್ಷಗಳಿಗೆ ಹೆಚ್ಚಿಸಲಾಗಿದೆ. ಹಾಗೂ **ಭಾಗಶಃ ಅಂಗವಿಕಲರಾದಲ್ಲಿ** ಈ ಹಿಂದೆ ನೀಡಲಾಗುತ್ತಿದ್ದ ರೂ.1.5 ಲಕ್ಷ ಪರಿಹಾರವನ್ನು ರೂ. 2 ಲಕ್ಷಗಳಿಗೆ ಹೆಚ್ಚಿಸಲಾಗಿದೆ.
- ಮೀನುಗಾರಿಕೆಯಲ್ಲಿ ತೊಡಗಿರುವಾಗ ಅಪಘಾತ ಸಂಭವಿಸಿ **ವೈದ್ಯಕೀಯ ಶುಶ್ರೂಷೆಗಾಗಿ** ಮಾಡಿದ ವೆಚ್ಚಕ್ಕೆ ಸಂಕಷ್ಟ ಪರಿಹಾರ ನಿಧಿ ಯೋಜನೆಯಡಿ ಈ ಹಿಂದೆ ನೀಡಲಾಗುತ್ತಿದ್ದ ಗರಿಷ್ಟ ರೂ.1.00 ಲಕ್ಷ ಪರಿಹಾರವನ್ನು ಗರಿಷ್ಟ ರೂ.3.00 ಲಕ್ಷಗಳಿಗೆ ಹೆಚ್ಚಿಸಲಾಗಿದೆ.

**4. ಯಾಂತ್ರೀಕೃತ ಮೀನುಗಾರಿಕೆ ದೋಣಿಗಳಿಗೆ ಕರರಹಿತ ಡೀಸೆಲ್ ವಿತರಣೆ ಯೋಜನೆ:**

ಕರರಹಿತ ಡೀಸಲ್‌ನ ವಾರ್ಷಿಕ ಮಿತಿಯನ್ನು 1.50 ಲಕ್ಷ ಕಿಲೋ ಲೀಟರ್‌ನಿಂದ 2.0 ಲಕ್ಷ ಕಿಲೋಲೀಟರ್‌ಗೆ ಹೆಚ್ಚಿಸಿ ಯಾಂತ್ರೀಕೃತ ದೋಣಿಗಳ ಮಾಲೀಕರ ಬಹುವರ್ಷಗಳ ಬೇಡಿಕೆಯನ್ನು ಈಡೇರಿಸಲಾಗಿದೆ.

**5. ಮೋಟರೀಕೃತ ಮೀನುಗಾರಿಕೆ ದೋಣಿಗಳಿಗೆ ಸೀಮೆಎಣ್ಣೆ ವಿತರಣೆ ಯೋಜನೆ:**

ಈ ಮೊದಲು ನಾಡದೋಣಿ ಮಾಲೀಕರು ಕೇಂದ್ರ ಸರ್ಕಾರದಿಂದ ವಿತರಿಸಲಾಗುತ್ತಿದ್ದ ಪಡಿತರ ಸೀಮೆಎಣ್ಣೆ ಮೇಲೆ ಅವಲಂಬಿತರಾಗಿದ್ದರು ಹಾಗೂ ಕೇಂದ್ರ ಸರ್ಕಾರದಿಂದ ಅಗತ್ಯಕ್ಕೆ ಅನುಗುಣವಾಗಿ ಸೀಮೆಎಣ್ಣೆ ಬಿಡುಗಡೆಯಾಗುತ್ತಿರಲಿಲ್ಲ. ಹೀಗಾಗಿ ನಾಡದೋಣಿ ಮೀನುಗಾರರು ಪ್ರತಿವರ್ಷ ಸಮಸ್ಯೆ ಎದುರಿಸುತ್ತಿದ್ದು ಪ್ರತಿಭಟನೆ ಮತ್ತು ರಸ್ತೆ ತಡೆ ಚಳುವಳಿಗಳನ್ನುಮಾಡುತ್ತಿದ್ದರು. 2023-24 ನೇ ಸಾಲಿನಿಂದ ನಾಡದೋಣಿ ಮೀನುಗಾರರಿಗೆ ಕೈಗಾರಿಕಾ ಸೀಮೆ ಎಣ್ಣೆಗೆ ಪ್ರತಿ ಲೀಟರ್ ಗೆ 35 ರೂಗಳ ರಿಯಾಯಿತಿ ದರದಲ್ಲಿ ನಿರಂತರವಾಗಿ ಪೂರೈಸಲು ಕ್ರಮವಹಿಸಲಾಗಿದ್ದು, ಸದರಿ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸಲಾಗಿದೆ.

ಮೀನುಗಾರಿಕೆ ನಿರ್ದೇಶಕರು